# ಶೆಟ್ಟರ 'ರೂಪಾಂತರ'

ನಟ ಹಾಗೂ ನಿರ್ದೇಶಕ ರಾಜ್ ಬಿ. ಶೆಟ್ಟಿ 'ರೂಪಾಂತರ' ಚಿತ್ರದೊಂದಿಗೆ ಬಂದಿದ್ದು, 'ಒಂದು ಮೊಟ್ಟೆಯ ಕಥೆ' ಚಿತ್ರತಂಡ ಈ ಸಿನಿಮಾ ಮೂಲಕ ಮತ್ತೆ ಒಂದಾಗುತ್ತಿದೆ.

ರಾಜ್ 'ಟರ್ಬೊ' ಚಿತ್ರದೊಂದಿಗೆ ಮಲಯಾಳಂನತ್ತ ಮುಖ ಮಾಡಿದ್ದರು. ಜೊತೆಗೆ ಅವರ 'ಟೋಬಿ', 'ಸ್ವಾತಿಮುತ್ತಿನ ಮಳೆ ಹನಿಯೇ' ಸಿನಿಮಾಗಳು ಕೂಡ ಚಿತ್ರಮಂದಿರಗಳಲ್ಲಿ ನಿರೀಕ್ಷಿಸಿದಷ್ಟು ಯಶಸ್ಸು ಗಳಿಸಲಿಲ್ಲ. ಇದೀಗ 'ರೂಪಾಂತರ' ಮೂಲಕ ಮತ್ತೊಂದು ಹೊಸ ಪ್ರಯತ್ನದಲ್ಲಿ ತೊಡಗಿದ್ದಾರೆ.

'ರೂಪಾಂತರ'ದ ಬಗ್ಗೆ ಮಾತನಾಡಿರುವ ರಾಜ್, 'ಕೆಲ ಸಿನಿಮಾಗಳು ಮನಸ್ಸಿಗೆ ತುಂಬಾ ಹತ್ತಿರ. ಅಂತಹ ಒಂದು ಸುಂದರ ಚಿತ್ರ ಈ 'ರೂಪಾಂತರ'. ಈ ಸಿನಿಮಾವನ್ನು ನಿಮ್ಮ ಮುಂದೆ ಪ್ರಸ್ತುತಪಡಿಸುವ ಜವಾಬ್ದಾರಿ ನನಗೆ ಲಭಿಸಿರುವುದು ನನ್ನ ವೃತ್ತಿಜೀವನದ ಭಾಗ್ಯ' ಎಂದು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ನಾಲ್ಕೈದು ವರ್ಷಗಳ ಹಿಂದೆಯೇ ಪ್ರಾರಂಭಗೊಂಡಿದ್ದ 'ರೂಪಾಂತರ' ಚಿತ್ರವನ್ನು ರಾಜ್ ತಮ್ಮ ಲೈಟರ್ ಬುದ್ಧ ಫಿಲಮ್ಸ್ ಮೂಲಕ ಪ್ರಸ್ತುಪಡಿಸುತ್ತಿದ್ದಾರೆ. ಮಿಥಿಲೇಶ್ ಈ ಸಿನಿಮಾ ನಿರ್ದೇಶನದ ಹೊಣೆ ಹೊತ್ತಿದ್ದಾರೆ.






# ರಾಧಿಕಾ

## ರೀಲ್ಸ್ ಮೀಮಾಂಸೆ

ರೀಲ್ಸ್ ಸಂಸ್ಕೃತಿಯೆಡೆಗೆ ವಾಲಿರುವ ಜನರನ್ನು ಸಿನಿಮಾ ಮೂಲಕ ರಂಜಿಸುವುದು ಈಗ ಸವಾಲಿನ ವಿಷಯ ಎಂದಿದ್ದಾರೆ ನಟಿ ರಾಧಿಕಾ ನಾರಾಯಣ್. ರೀಲ್ಸ್‌ಗಳು, ಒಟಿಟಿ, ಹೇಗೆ ಸಿನಿಮಾ ಕ್ಷೇತ್ರದ ಮೇಲೆ ಪರಿಣಾಮ ಬೀರಿದೆ ಎಂಬುದರ ಕುರಿತು ಮಾತನಾಡಿರುವ ಅವರು, ಥಿಯೇಟರ್‌ಗಳಿಗೆ ಜನ ಏಕೆ ಬರುತ್ತಿಲ್ಲ ಎಂಬುದರ ಕುರಿತು ತಮ್ಮದೊಂದು ವಿಶ್ಲೇಷಣೆ ಮುಂದಿಟ್ಟಿದ್ದಾರೆ.

'ಪುಟ್ಟ ಪುಟ್ಟ ವಿಡಿಯೊಗಳಿಂದ ಜನರು ಮನರಂಜನೆ ಪಡೆಯುತ್ತಿದ್ದಾರೆ. ಮನರಂಜನಾ ಆಯ್ಕೆ, ಅಭಿರುಚಿಯೇ ಬದಲಾಗಿದೆ. ಇದು ಈಗಿನ ಸಿನಿಮಾ ನಿರ್ದೇಶಕರಿಗೆ ಹೊಸ ಸವಾಲು ಎಂದೇ ಹೇಳಬಹುದು. ರೀಲ್ಸ್ ಸಂಸ್ಕೃತಿಗೆ ಒಗ್ಗಿ ಹೋದವರನ್ನು ಗಂಟೆಗಟ್ಟಲೆ ಸಿನಿಮಾ ಮೂಲಕ ಹಿಡಿದಿಡುವುದು ಸವಾಲು ಹೌದಲ್ಲವೇ?' ಎಂಬ ಪ್ರಶ್ನೆಯನ್ನು ಮುಂದಿಟ್ಟಿದ್ದಾರೆ.

''ರಂಗಿತರಂಗ' ಸಿನಿಮಾ ಒಂದು ವರ್ಷದವರೆಗೂ ಥಿಯೇಟರ್‌ನಲ್ಲಿತ್ತು. ಈ ದಿನಗಳಲ್ಲಿ ಇದು ಅಪರೂಪದ ದೃಶ್ಯ. ಆಗಿನ್ನೂ ಒಟಿಟಿ ಇಷ್ಟು ಸದ್ದು ಮಾಡಿರಲಿಲ್ಲ. ಆದರೆ ಈಗ ಹಲವು ಸಂಗತಿಗಳು ಬದಲಾಗಿವೆ. ಮನೆಯಲ್ಲಿಯೇ ಬೇಕೆಂದಾಗ ಸಿನಿಮಾ ನೋಡುವ ಆಯ್ಕೆಯನ್ನು ಒಟಿಟಿ ನೀಡಿದೆ. ಇದರ ನಡುವೆಯೂ ಥಿಯೇಟರ್‌ಗಳಿಗೆ ಹೋಗಿ ಸಿನಿಮಾ ನೋಡುವ ಒಂದಷ್ಟು ಜನ ಇದ್ದಾರೆ ಎಂಬುದು ಸಮಾಧಾನಕರ ಸಂಗತಿ'' ಎಂದಿದ್ದಾರೆ.

ನಟಿಯರು ಬೇರೆ ಸಿನಿಮಾರಂಗಗಳಿಗೆ ತೆರಳುವ ಕಾರಣಕ್ಕೆ ಕೆಂಗಣ್ಣಿಗೆ ಗುರಿಯಾಗುವ ಬಗ್ಗೆ ಮಾತನಾಡುತ್ತಾ, 'ಕಲೆ ಒಂದು ಭಾಷೆಗೆ ಸೀಮಿತವಲ್ಲ. ಇನ್ನೊಂದು ಭಾಷೆಯಲ್ಲಿ ಸಿನಿಮಾ ಮಾಡುವುದು ವೈವಿಧ್ಯವನ್ನು ಒಳಗೊಂಡಂತೆ. ನಮಗೆ ಕೆಲವೇ ಕೆಲವು ಪಾತ್ರಗಳು ಸಿಗುತ್ತವೆ. ಒಂದೇ ಭಾಷೆಗೆ ನಮ್ಮನ್ನು ಸೀಮಿತ ಮಾಡಿಕೊಂಡರೆ ಒಳ್ಳೆಯ ಸಿನಿಮಾಗಳು ಹಾಗೂ ಒಳ್ಳೆಯ ಪಾತ್ರಗಳಿಂದಲೂ ವಂಚಿತರಾದಂತೆ. ನೀವು ನಿಮ್ಮ ಭಾಷೆಯನ್ನು ಎಲ್ಲಿಯವರೆಗೆ ಪುರಸ್ಕರಿಸುತ್ತೀರೋ ಅಲ್ಲಿಯವರೆಗೂ ಯೋಚಿಸುವ ಅಗತ್ಯವಿಲ್ಲ' ಎಂದು ವಿವರಣೆ ನೀಡಿದ್ದಾರೆ.

ಸಿನಿಮಾರಂಗದಲ್ಲಿ ಮಹಿಳೆಯರ ಒಳಗೊಳ್ಳುವಿಕೆ ಕುರಿತು ಮಾತನಾಡಿದ ಅವರು, 'ಹೆಚ್ಚೆಚ್ಚು ಮಹಿಳಾ ನಿರ್ದೇಶಕರು ಹಾಗೂ ಬರಹಗಾರರು ಈ ಕಾಲದ ಅಗತ್ಯ. ಮಹಿಳೆಯರ ಕುರಿತು ಪುರುಷರ ದೃಷ್ಟಿಕೋನ ಸೀಮಿತವಾಗಿರುತ್ತದೆ. ಮಹಿಳಾ ನಿರ್ದೇಶಕರು ಹಲವು ಬದಲಾವಣೆಗಳನ್ನು ತರಬಲ್ಲರು, ಮಹಿಳಾ ಪಾತ್ರಗಳಿಗೆ ಪುರುಷರಿಗಿಂತ ಹೆಚ್ಚಾಗಿ ನ್ಯಾಯ ಒದಗಿಸಬಲ್ಲರು' ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.